| | |
|---|---|
| **ಚುಕ್ಕೆ ಗುರುತಿನ ಪ್ರಶ್ನೆ** | **177(1410)** |
| **ವಿಧಾನಪರಿಷತ್ತ್ಸದಸ್ಯರ ಹೆಸರು** | **ಶ್ರೀಮರಿತಿಬ್ಬೇಗೌಡ (ಶಿಕ್ಷಕರಕ್ಷೇತ್ರ)** |
| **ಉತ್ತರಿಸಬೇಕಾದ ದಿನಾಂಕ** | **09/03/2022** |
| **ಉತ್ತರಿಸುವ ಸಚಿವರು** | ಮಾನ್ಯಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಹಕ್ಕುದಾಖಲೆ ತಿದ್ದುಪಡಿಗೆ ಆರ್.ಆರ್.ಟಿ ಶಾಖೆಯಲ್ಲಿ ಕಾಲಂ 3 ಮತ್ತು ಕಾಲಂ 9 ತಾಳೆಯಾಗದಿರುವ ಸಂಬಂಧಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು;(ಜಿಲ್ಲಾವಾರು ಮಾಹಿತಿ ನೀಡುವುದು) | ದಿನಾಂಕ 05.03.2022 ರ ವರದಿಯಂತೆ ರಾಜ್ಯದಲ್ಲಿ ಕಾಲಂ 3 ಮತ್ತು ಕಾಲಂ 9 ತಾಳೆಯಾಗದಿರುವ ಸಂಬಂಧ ಒಟ್ಟು 94673 ಪ್ರಕರಣಗಳಿರುತ್ತವೆ. (ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ) |
| (ಆ) | ಆರ್.ಆರ್.ಟಿ ವಿಭಾಗದ ಭ್ರಷ್ಟಾಚಾರ ಹಾಗೂ ವಿಳಂಬದಿಂದಾಗಿ ರೈತರಿಗೆ ತೊಂದರೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಆರ್.ಆರ್.ಟಿ ವಿಭಾಗದ ವಿಳಂಬದಿಂದಾಗಿ ರೈತರಿಗೆ ತೊಂದರೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಆದರೆ ಸದರಿ ಕಡತಗಳ ವಿಲೇವಾರಿ ಮಾಡಲು ಸ್ಥಳ ಪರಿಶೀಲನೆ ಮಾಡುವುದು, ದಾಖಲೆಗಳನ್ನು ಪರಿಶೀಲಿಸುವುದು ಹಾಗೂ ಗ್ರಾಮಲೆಕ್ಕಿಗರು ರಾಜಸ್ವನೀರಿಕ್ಷಕರಿಂದ ವರದಿ ಪಡೆದು ತಹಶೀಲ್ದಾರ್ ರವರು ನಿಯಮಾನುಸಾರ ಪರಿಶೀಲಿಸಿ, ಉಪವಿಭಾಗಾಧಿಕಾರಿಗಳಿಗೆ ಕಡತ ಕಳುಹಿಸಿಕೊಡಲಾಗುತ್ತದೆ. ಉಪವಿಭಾಗಾಧಿಕಾರಿಗಳು ಅರೆನ್ಯಾಯಿಕ ಪ್ರಕರಣಗಳಂತೆ ನೋಟೀಸ್ ನೀಡಿ ವಿಚಾರಣೆ ನಡೆಸಿ, ನಿಯಮಾನುಸಾರ ಕ್ರಮ ಕೈಗೊಳ್ಳಬೇಕಾಗಿರುವುದರಿಂದ ಹೆಚ್ಚಿನ ಸಮಯದ ಅವಶ್ಯಕತೆ ಇರುತ್ತದೆ. |
| (ಇ) | ಸದರಿ ವಿಳಂಬಕ್ಕೆ ಕಾರಣಗಳೇನು; ವಿಳಂಬ ತಪ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ಒದಗಿಸುವುದು) | ಮಾನ್ಯ ಆಯುಕ್ತರು ಭೂಮಾಪನ ಇಲಾಖೆ ರವರ ಸುತ್ತೋಲೆ ದಿನಾಂಕ 23.06.2016 ರಲ್ಲಿ ಕಾಲಂ 3&9 ತಾಳೆ ಇರದ ಪ್ರಕರಣಗಳನ್ನು ಸರಿಪಡಿಸಲು ವಿವರವಾದ ನಿರ್ದೇಶನ ಒಳಗೊಂಡ ಸುತ್ತೋಲೆಯನ್ನು ಹೊರಡಿಸಿದ್ದು ಅದರಂತೆ ಸಂಬಂದಪಟ್ಟ ಉಪವಿಭಾಗಾಧಿಕಾರಿಳಿಗೆ ಮತ್ತು ತಹಶೀಲ್ದಾರ್ ರವರಿಗೆ ಕ್ರಮಕೈಗೊಳ್ಳಲು ಸೂಚಿಸಲಾಗಿರುತ್ತದೆ.<br>ಮುಂದುವರೆದು, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ರವರು ಪ್ರತಿ ಮಾಹೆ 3 & 9 ತಿದ್ದುಪಡಿ ಬಗ್ಗೆ ಪರಿಶೀಲನಾ ಸಭೆ ನಡೆಸಿ, ತ್ವರಿತವಾಗಿ ಪ್ರಕರಣಗಳನ್ನು ಇತ್ಯರ್ಥಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |
| (ಈ) | ತೊಂದರೆ ತಪ್ಪಿಸಲು ಆನ್ಲೈನ್ವ್ಯವಸ್ಥೆ ಹಾಗೂ ಸಕಾಲ ವ್ಯಾಪ್ತಿಗೆ ತರಲು ಸರ್ಕಾರ ಕ್ರಮಕೈಗೊಳ್ಳುವುದೇ? | ಪ್ರಸ್ತುತ ಕಾಲಂ 3 & 9 ತಿದ್ದುಪಡಿಯು ಸಕಾಲದ ವ್ಯಾಪ್ತಿಯಲ್ಲಿರುವುದಿಲ್ಲ. ಸಕಾಲದ ವ್ಯಾಪ್ತಿಯಲ್ಲಿ ತರಲು ಸರ್ಕಾರದ ಚಿಂತನೆಯಲ್ಲಿರುತ್ತದೆ. |

(ಆರ್. ಅಶೋಕ)
ಕಂದಾಯ ಸಚಿವರು

## RTC COLUMN 3 & 9 MISMATCH REPORT

| Sl.No. | District | MISMATCH |
|---|---|---|
| 1 | Bagalkot | 342 |
| 2 | Bangalore Rural | 6192 |
| 3 | Bangalore Urban | 18192 |
| 4 | Belgaum | 8043 |
| 5 | Bellary | 1045 |
| 6 | Bidar | 1648 |
| 7 | Bijapur | 1802 |
| 8 | Chamarajanagara | 192 |
| 9 | Chikballapur | 2522 |
| 10 | Chikmagalur | 1184 |
| 11 | Chitradurga | 433 |
| 12 | Dakshina Kannada | 410 |
| 13 | Davanagere | 701 |
| 14 | Dharwad | 842 |
| 15 | Gadag | 63 |
| 16 | Gulbarga | 8392 |
| 17 | Hassan | 3539 |
| 18 | Haveri | 174 |
| 19 | Kodagu | 65 |
| 20 | Kolar | 4847 |
| 21 | koppal | 728 |
| 22 | Mandya | 663 |
| 23 | Mysore | 2650 |
| 24 | Raichur | 1901 |
| 25 | Ramanagara | 1716 |
| 26 | Shimoga | 5950 |
| 27 | Tumkur | 13303 |
| 28 | Udupi | 55 |
| 29 | Uttar Kannada | 2227 |
| 30 | Vijayanagara | 326 |
| 31 | Yadgir | 4526 |
| Grand Total | | 94673 |